ಪಿಡಬ್ಲುಃ 1

ದಿನಾಂಕಃ 11-12-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ ಆರ್ ಜಿ ಎನ್ ವಕೀಲರಿಂದ 1 ನೇ ಪ್ರತಿವಾದಿ ಪರಃ

ನಾನು ಈ ದಾವೆ ದಾಖಲಿಸುವ ಸುಮಾರು 4-5 ವರ್ಷಗಳ ಹಿಂದೆ ನನ್ನ ಗಂಡನಿಂದ ವಿವಾಹ ವಿಚ್ಛೇದನ ಪಡೆದುಕೊಂಡಿದ್ದೆ. ನಾನು ಹಾಗೂ ನನ್ನ ಗಂಡ 27-28 ವರ್ಷಗಳ ಕಾಲ ಜೊತೆಯಾಗಿ ಇದ್ದೆವು. ನನ್ನ ವಿವಾಹ ಎಷ್ಟನೇ ಇಸ್ವಿಯಲ್ಲಿ ಆಗಿತ್ತು ಎಂದು ಹೇಳಲು ನನಗೆ ಗೊತ್ತಾಗುವುದಿಲ್ಲಾ. ರಾಮಾ ಸುಬ್ರಾಯ ನಾಯ್ಕ ಇವರ ಮನೆ ಮೊದಲು ಬಾಡದಲ್ಲಿ ಇತ್ತು. ನಾನು ಈಗ್ಗೆ 17-18 ವರ್ಷಗಳಿಂದ ಮಿರ್ಜಾನದಲ್ಲಿ ವಾಸ್ತವ್ಯ ಇದ್ದೇನೆ. ನನ್ನ ಮದುವೆಯಾದ ಎಷ್ಟು ವರ್ಷಗಳ ನಂತರ ನನ್ನ ಗಂಡ ಮೃತಪಟ್ಟಿದ್ದಾರೆ ಎಂದು ಹೇಳಲು ನನಗೆ ಗೊತ್ತಾಗುವುದಿಲ್ಲಾ. ನನಗೆ ನನ್ನ ಗಂಡ ವಿವಾಹವಿಚ್ಛೇದನ ಕೊಟ್ಟ ನಂತರ ನಾನು ಮಿರ್ಜಾನನಲ್ಲಿ ಇದ್ದೆ ನನ್ನ ಗಂಡ ಬಾಡದಲ್ಲಿ ಇದ್ದರು. ಬಾಡದಲ್ಲಿ ಅವರು ಮೊದಲು ಗೊಯ್ದಪ್ಪ ನಾಯ್ಕ ರವರ ಮನೆಯಲ್ಲಿ ಉಳಿದಿದ್ದರು ಆ ನಂತರ ಅವರು 3-4 ಬೇರೆಯವರ ಮನೆಯಲ್ಲಿ ಉಳಿದುಕೊಂಡು ಕೊನೆಯದಾಗಿ 2 ನೇ ಪ್ರತಿವಾದಿಯ ಮನೆಯಲ್ಲಿ ಉಳಿದಿದ್ದರು. ಅವರು ನನಗೆ ವಿಚ್ಛೇದನ ಕೊಟ್ಟ ನಂತರ ಅವರ ಸ್ಥಿರಾಸ್ತಿ ಕುರಿತು ಏನೇನು ಮಾಡಿದ್ದಾರೆಂದು ನನಗೆ ಮಾಹಿತಿ ಇಲ್ಲಾ. ವಿವಾಹ ವಿಚ್ಛೇದನಕ್ಕೆ ಮೊದಲು ಅರ್ಜಿಯನ್ನು ಸಲ್ಲಿಸಿದವರು ನನ್ನ ಗಂಡನಿರುತ್ತಾನೆ. ಸದರಿ ಪ್ರಕರಣದಲ್ಲಿ ನಾನು ನ್ಯಾಯಾಲಯದ ಮುಂದೆ ನನ್ನ ಗಂಡ ಬೇಕು ಎಂದು ಹೇಳಿದ್ದೆ.

2. 1 ನೇ ಪ್ರತಿವಾದಿ ಎಷ್ಟು ವರ್ಷಗಳಿಂದ ಗಜನಿಯ ಅಧ್ಯಕ್ಷನಾಗಿದ್ದಾನೆ ಎಂದು ನನಗೆ ಗೊತ್ತಿಲ್ಲಾ. ಗಜನಿಯಲ್ಲಿ ಒಟ್ಟು 28 ಜನ ಸಾಗುವಳಿದಾರರು ಇದ್ದಾರೆ. ಆ ರೀತಿ ಕೇವಲ 28 ಜನ ಇದ್ದಾರಾ ಎಂದು ನನಗೆ ನಿಖರವಾಗಿ ಗೊತ್ತಿಲ್ಲಾ ಅದಕ್ಕಿಂತಲೂ ಜಾಸ್ತಿ ಇರಬಹುದು ಆದರೆ ನಾನು ಗಜನಿಯ ಸಭೆಗೆ ಹೋಗಿದ್ದಾಗ ಅಲ್ಲಿ 28 ಜನ ಇದ್ದರು. ಗಜನಿಯಲ್ಲಿ ಸಾಗುವಳಿ ಮಾಡುತ್ತಿದ್ದವರ ಪೈಕಿ ಪಾಲು ಮಾಡಿಕೊಂಡಿದ್ದು ಒಟ್ಟು ಎಷ್ಟು ಜನ ಸಾಗುವಳಿ ಮಾಡುತ್ತಾರೆ ಎಂದು ನನಗೆ ಹೇಳಲು ಗೊತ್ತಾಗುವುದಿಲ್ಲಾ. ಗಜನಿಗೆ ಅಧ್ಯಕ್ಷನನ್ನು ಹೇಗೆ ಆಯ್ಕೆ ಮಾಡುತ್ತಾರೆ ಎಂದು ನನಗೆ ಗೊತ್ತಿದೆಯಾ ಎಂದರೆ ಒಬ್ಬರನ್ನು ಮೇಲಾಧಿಕಾರಿಯನ್ನಾಗಿ ಮಾಡಿ ಅಧ್ಯಕ್ಷನನ್ನಾಗಿ ಮಾಡುತ್ತಾರೆ. ರಾಮಾ ನಾಯ್ಕ ಇವರಿಗೆ ದಾವಾ ಗಜನಿಯಲ್ಲಿ 1 ಹಸಿಗೆ ಕ್ಷೇತ್ರದ ಮೇಲೆ ಹಕ್ಕು ಇತ್ತು. 1 ಹಸಿಗೆ ಎಂದರೆ ಎಷ್ಟು ಕ್ಷೇತ್ರ ಎಂದು ಹೇಳಲು ನನಗೆ ಗೊತ್ತಾಗುವುದಿಲ್ಲಾ. 1 ನೇ ಪ್ರತಿವಾದಿಯನ್ನು ನಾನು ದಾವಾಸ್ತಿಯ ಹಣವನ್ನು ಕೊಡುವಂತೆ ಕೇಳಿದಾಗ ಅವನು ಏನು ಉತ್ತರ ಕೊಟ್ಟಿದ್ದಾರೆ ಎಂಬುದನ್ನು ನಾನು ನನ್ನ ವಕೀಲರಿಗೆ ಹೇಳಿದ್ದೇನೆ. ಈ ದಾವೆಯಲ್ಲಿ ನನಗೆ ಮತ್ತು ರಾಮಾ ಸುಬ್ರಾಯ ನಾಯ್ಕ ಇವರಿಗೆ ವಿಚ್ಛೇದನ ಆಗಿದೆ ಎಂಬುದನ್ನು ಬರೆಸಿದ್ದೇನೆ. ನಾನು ದಾವಾಸ್ತಿಯ ಹಣ ಕೊಡುವಂತೆ 1 ನೇ ಪ್ರತಿವಾದಿಯನ್ನು ಎಷ್ಟನೇ ಇಸ್ವಿಯಲ್ಲಿ ಕೇಳಿದ್ದೆ ಎಂದು ಹೇಳಲು ನನಗೆ ಗೊತ್ತಾಗುವುದಿಲ್ಲಾ. ಗಜನಿಯ ಕುರಿತು ಹಣವನ್ನು ಕೊಡಬೇಕಾದರೆ ಆ ವ್ಯಕ್ತಿಯ ಹೆಸರು ಪಹಣಿಪತ್ರಿಕೆಯಲ್ಲಿ ಇದ್ದರೆ ಕೊಡುತ್ತಾರೆ. ಈ ದಾವೆಯನ್ನು ದಾಖಲಿಸುವ ಸಮಯದಲ್ಲಿ ರಾಮಾ ಸುಬ್ರಾಯ ನಾಯ್ಕ ನನ್ನ

ಗಂಡ ಅಗಿರಲಿಲ್ಲಾ ಎಂದರೆ ಸರಿಯಲ್ಲಾ. ನಾನು ವಿವಾಹ ವಿಚ್ಚೇದನ ಕೊಟ್ಟ ನಂತರ ಅವನು ನನ್ನ ಗಂಡ ಎಂದು ಹೇಳಲು ಆಗುವುದಿಲ್ಲಾ ಎಂದರೆ ನನ್ನ ಮಕ್ಕಳಿಗೆ ಅವನ ಸಂಬಂಧ ಹೇಳಬಹುದು. ನಾನು ನನ್ನ ಗಂಡನಿಗೆ ವಿಚ್ಚೇದನ ಕೊಟ್ಟ ನಂತರ ನನ್ನ ಮಕ್ಕಳಿಗೆ ಸಹ ನನ್ನ ಗಂಡನ ಜೊತೆ ಸಂಬಂಧ ಉಳಿಯುವುದಿಲ್ಲಾ ಎಂದರೆ ಸರಿಯಲ್ಲಾ. ನನ್ನ ಮಕ್ಕಳು ಯಾವುದೇ ಕಾಲಕ್ಕೆ ನನ್ನ ವಿಚ್ಚೇದಿತ ಗಂಡನನ್ನು ನೋಡಿಕೊಂಡು ಬಂದಿದ್ದು ಇಲ್ಲಾ ಎಂದರೆ ಸರಿಯಲ್ಲಾ. ಹಾಗಾಗೀ ನನ್ನ ವಿಚ್ಚೇದಿತ ಗಂಡ 2 ನೇ ಪ್ರತಿವಾದಿಯ ಹೆಸರಿಗೆ ವಿಲ್ ಮಾಡಿದ್ದಾನೆ ಎಂದರೆ ಸರಿಯಲ್ಲಾ. ವಿಲ್ ಬಗ್ಗೆ ನನ್ನ ದಾವೆಯಲ್ಲಿ ಹೇಳಿದ್ದೇನೆ. ಸದರಿ ವಿಲ್ ನಾಮೆಯನ್ನು ರದ್ದು ಪಡಿಸಬೇಕೆಂದು ನಾನು ನ್ಯಾಯಾಲಯಕ್ಕೆ ದಾವೆ ಸಲ್ಲಿಸಿದ್ದೇನಾ ಎಂದರೆ ನನಗೆ ಅರ್ಥವಾಗುವುದಿಲ್ಲಾ. ರಾಮಾ ಸುಬ್ರಾಯ ನಾಯ್ಕ ಇವರು ಮೃತಪಡುವಾಗ ಅವರಿಗೆ ಎಷ್ಟು ವರ್ಷ ವಯಸ್ಸಾಗಿತ್ತು ಎಂದು ಹೇಳಲು ನನಗೆ ನೆನಪಿಲ್ಲಾ. ನನ್ನ ಮಕ್ಕಳು ನನ್ನ ಗಂಡನನ್ನು ನೋಡಲು ಹೋಗಿ ಬಂದು ಮಾಡುತ್ತಿದ್ದಾಗ ನನ್ನ ಗಂಡನಿಗೆ ಅನಾರೋಗ್ಯವಾಗಿತ್ತು ಎಂದು ನನಗೆ ಹೇಳಿದ್ದರು. ಆ ರೀತಿ ಯಾವ ಇಸ್ವಿಯಲ್ಲಿ ಹೇಳಿದ್ದರು ಎಂದು ನನಗೆ ನೆನಪಿಲ್ಲಾ. ನಾನು ಹೇಳಿದ ರೀತಿಯಲ್ಲಿ ನಾನು ಯಾವುದೇ ಕಾಲಕ್ಕೆ ನನ್ನ ಗಂಡನೊಂದಿಗೆ ಬಾಳ್ವೆ ಮಾಡಿದ್ದು ಇಲ್ಲಾ ಮತ್ತು ಅವನನ್ನು ನೋಡಿ ಬಂದಿದ್ದು ಇಲ್ಲಾ ಎಂದರೆ ಸರಿಯಲ್ಲಾ. ನನ್ನ ಮಕ್ಕಳು ಅವರನ್ನು ನೋಡಿಕೊಂಡು ಬಂದಿದ್ದರೆ ಅವರು 2 ನೇ ಪ್ರತಿವಾದಿಗೆ ವಿಲ್ ಮಾಡುವ ಪ್ರಸಂಗ ಬರುತ್ತಿರಲಿಲ್ಲಾ ಎಂದರೆ ವಿಲ್ ಮಾಡಿರುವುದು ಸುಳ್ಳು. ನಾನು ಮದುವೆಯಾದಾಗಿನಿಂದ ನಾನು ರಾಮಾ ಸುಬ್ರಾಯ ನಾಯ್ಕ ಇವನ ಜೊತೆ ಸಂಸಾರ ನಡೆಸಿ ಬಂದಿದ್ದು ಇಲ್ಲಾ ಎಂದರೆ ಸರಿಯಲ್ಲಾ. ನಾನು ಅವನನ್ನು ಜೀವಿತ ಕಾಲದಲ್ಲಿ ಸರಿಯಾಗಿ ನೋಡಿಕೊಂಡಿಲ್ಲದೇ ಇರುವ ಕಾರಣ ನಾವು ಅವನ ವಾರಸುದಾರರಾಗಲು ಸಾಧ್ಯವಿಲ್ಲಾ ಎಂದರೆ ಸರಿಯಲ್ಲಾ. ನನಗೆ ಈ ದಾವೆ ದಾಖಲಿಸಲು ಯಾವುದೇ ಹಕ್ಕು ಇಲ್ಲಾ ಎಂದರೆ ಸರಿಯಲ್ಲಾ. ನಾನು ಹೇಳಿದಂತೆ ರಾಮಾ ಸುಬ್ರಾಯ ನಾಯ್ಕ ಇವರು ನನ್ನ ಗಂಡನಲ್ಲಾ ಎಂದರೆ ಸರಿಯಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಕುಮಟಾ.